C.C.. No. 400/2026 CW: 5 ,PW: 5

**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 400/2026
ಸಿ.ಡಬ್ಲ್ಯೂಃ 5
ಪಿ.ಡಬ್ಲ್ಯೂಃ 5

ಸಾಕ್ಷಿದಾರರ ಹೆಸರುಃ ಚೈತ್ರ

ಗಂಡನ ಹೆಸರುಃ ಚಂದ್ರಶೇಖರ ಗೌಡ

ವಯಸ್ಸುಃ 32 ವರ್ಷ

ಉದ್ಯೋಗಃ ಸ್ಟಾಫ್ ನರ್ಸ್

ವಾಸಸ್ಥಳಃ ಮಾಣಿ ಗ್ರಾಮ

ದಿನಾಂಕ 31-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾ.ಸಾ.1 ನನ್ನ ಬಾವ . ಚಾ.ಸಾ.2 ನನ್ನ ಅತ್ತೆ. ಚಾ.ಸಾ.3 ನನ್ನ ತಾಯಿ.. ಚಾ,ಸಾ.4 ನನ್ನ ಚಿಕ್ಕಮ್ಮ. ನಾನು ಮಾಣಿಯಲ್ಲಿ ನನ್ನ ಸಂಸಾರದ ಜೊತೆ ವಾಸವಾಗಿರುತ್ತೇನೆ. ಘಟನಾ ಸಮಯದಲ್ಲಿ ಆರ್ಯಾಪು ಗ್ರಾಮದಲ್ಲಿರುವ ಚಾ.ಸಾ.3 ರವರು ವಾಸವಿರುವ ಮನೆಗೆ ಹೋಗಿರುತ್ತೇನೆ. ಘಟನೆಗಿಂತ 3 ದಿನಗಳ ಹಿಂದೆ ಚಾ.ಸಾ.2 ರವರು ಅವರ ತಾಯಿ ಮನೆಗೆ ಬಂದಿದ್ದರು. ಅಲ್ಲಿಗೆ ಬರುವಾಗ ಚಾ.ಸಾ.2 ರವರು ಎರಡೂವರೆ ಪವನ್ ನ ಚಿನ್ನದ ಸರವನ್ನು ಕುತ್ತಿಗೆಗೆ ಹಾಕಿಕೊಂಡು ಬಂದಿರುತ್ತಾರೆ. ಆ ಚಿನ್ನದ ಸರವನ್ನು ಘಟನೆಗಿಂತ 6 ತಿಂಗಳ ಮುಂಚೆ ಖರೀದಿಸಿರುತ್ತಾರೆ. ದಿನಾಂಕ 26-12-2025 ರಂದು ನಾನು , ಚಾ.ಸಾ.2 ನನ್ನ ತಾಯಿಯಾದ ,ಚಾ.ಸಾ.3 ಮತ್ತು ಚಾ.ಸಾ. 4 ರವರ ಜೊತೆ ಕಾರ್ಪಾಡಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಸುಬ್ರಹ್ಮಣ ಷಷ್ಟಿ ದೇವಸ್ಥಾನಕ್ಕೆ ಹೋಗಿದ್ದೆವು. ಆ ಸಮಯ ಕೂಡಾ ಚಾ.ಸಾ.2ರವರು ಚಿನ್ನದ ಸರವನ್ನು ಧರಿಸಿಕೊಂಡು ಬಂದಿರುತ್ತಾರೆ.

2. ಪೂಜೆ ಮುಗಿಸಿ ಮಧ್ಯಾಹ್ನ 12.30 ರ ಸಮಯದಲ್ಲಿ ದೇವಸ್ಥಾನದ ಹತ್ತಿರ ಇರುವ ಪಾರ್ಕಿಂಗ್ ಜಾಗದಲ್ಲಿ ನಾನು , ಚಾ.ಸಾ.3 ಮತ್ತು ಚಾ.ಸಾ. 4 ರವರು ಮುಂದೆ ಹೋಗುತ್ತಿದ್ದು ಚಾ.ಸಾ.2 ರವರು ನಮ್ಮ ಹಿಂದೆ ಬರುತ್ತಿದ್ದರು. ನಾವು ಮುಂದಕ್ಕೆ ಹೋಗಿ ಚಾ.ಸಾ.2 ರವರಿಗೆ ಕಾಯುತ್ತಿರುವಾಗ ಚಾ.ಸಾ.2 ರವರು ಗಾಬರಿಗೊಂಡು ನಮ್ಮ ಬಳಿ ಬಂದು ಅವರ ಕುತ್ತಿಗೆಯನ್ನು ತೋರಿಸಿ ಯಾರೋ ಕುತ್ತಿಗೆಗೆ ಕೈ ಹಾಕಿ ಕುತ್ತಿಗೆಯಲ್ಲಿದ್ದ ಬಂಗಾರದ ಚೈನ್ ನ್ನು

ಎಳೆದುಕೊಂಡು ಹೋದರು ಎಂದು ತಿಳಿಸಿರುತ್ತಾರೆ. ನಂತರ ನಾವು ಅಲ್ಲಿ ಹುಡುಕಿದಾಗ ಯಾರೂ ಸಿಗಲಿಲ್ಲ. ನಂತರ ನಾವು ಅಲ್ಲಿಂದ ಮನೆಗೆ ವಾಪಾಸ್ಸು ಹೋಗಿರುತ್ತೇವೆ. ಆ ಸಮಯ ನಾನು ಈ ವಿಚಾರವನ್ನು ಚಾ.ಸಾ.1 ರವರಿಗೆ ಕರೆ ಮಾಡಿ ತಿಳಿಸಿರುತ್ತಾರೆ.

3. ಮರು ದಿನ ಚಾ.ಸಾ.1 ರವರು ಪೊಲೀಸು ಠಾಣೆಗೆ ಹೋಗಿ ಕಳ್ಳತನವಾಗಿದ್ದ ವಿಚಾರವನ್ನು ತಿಳಿಸಿದರು. ಚಾ.ಸಾ.2 ರವರ ಚಿನ್ನದ ಸರ ಎರಡೂವರೆ ಪವನ್ ತೂಕವಿದ್ದು ಅದರ ಮೌಲ್ಯ 1,80,000/- ರೂ. ಆಗಿರುತ್ತದೆ.

4. ಚಾ.ಸಾ.2 ರವರಿಗೆ ಚಾಕು ತೋರಿಸಿ ಜೀವಬೆದರಿಕೆ ಹಾಕಿ ಚಿನ್ನದ ಸರವನ್ನು ಸುಲಿಗೆ ಮಾಡಿಲ್ಲ. ನಾನು ಸ್ಥಳದಲ್ಲಿ ಆರೋಪಿಗಳನ್ನು ನೋಡಿಲ್ಲ ಹಾಗೂ ಪೊಲೀಸು ಠಾಣೆಯಲ್ಲಿ ಆರೋಪಿಗಳನ್ನು ನೋಡಿ ಗುರುತಿಸಿಲ್ಲ. ಚಾ.ಸಾ.2 ರವರ ಚಿನ್ನದ ಸರ ಇದುವರೆಗೂ ಸಿಕ್ಕಿರುವುದಿಲ್ಲ. ನಾನು ಪೊಲೀಸರಿಗೆ ಘಟನೆಯ ಸಂಬಂಧ ಹೇಳಿಕೆ ಹಾಗೂ ಮರು ಹೇಳಿಕೆ ಕೊಟ್ಟಿಲ್ಲ.

5.ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿತರ ಪರಿಚಯ ನನಗೆ ಇಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಬೇಕೆಂದು ಕೋರಿದ್ದು , ವಾದವನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

6. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಘಟನಾ ಸ್ಥಳ ಹಾಗೂ ದಿನಾಂಕದಂದು ಚಾ.ಸಾ.2 ರವರು ದೇವಸ್ಥಾನದ ಪಾರ್ಕಿಂಗ್ ಜಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ 3 ಅಪರಿಚಿತ ಹೆಂಗಸರು ಅವರನ್ನು ಸುತ್ತುವರಿದು ಗುಂಪಿನಲ್ಲಿ ತಳ್ಳಿಕೊಂಡು ಹೋಗುತ್ತಾ ಅಲ್ಲಿಯೇ ಇದ್ದ ಕಂಪೌಂಡ್ ಬಳಿ ಸೇರಿಸಿಕೊಂಡಾಗ ಅವರು ಗಲಿಬಿಲಿಗೊಂಡು ಅಲ್ಲಿಂದ ಬರಲು ಪ್ರಯತ್ನಿಸಿದಾಗ ಅವರ ಕುತ್ತಿಗೆಯಲ್ಲಿ ಹಾಕಿಕೊಂಡಿದ್ದ ಬಂಗಾರದ ಸರವನ್ನು ಮಹಿಳೆಯು ಎಳೆಯಲು ಪ್ರಯತ್ನಿಸಿದ್ದು ಆಗ ಚಾ,ಸಾ.2 ರವರು ತನ್ನ ಸರವನ್ನು ಗಟ್ಟಿಯಾಗಿ ಹಿಡಿದುಕೊಂಡಾಗ ಆ ಮಹಿಳೆಯರು ಅವರನ್ನು ಸುತ್ತುವರಿದಿದ್ದು ಅವರಲ್ಲಿ ನೀಲಿ ಸೀರೆ ಉಟ್ಟವಳು ತನ್ನ ಕೈಯಲ್ಲಿದ್ದ ಚಿಕ್ಕ ಚೂರಿಯನ್ನು ತೋರಿಸಿ ಕಣ್ಣಿನಿಂದ ದುರುಗುಟ್ಟಿ ನೋಡಿ ಸದ್ದು ಮಾಡದಂತೆ ಎಚ್ಚರಿಕೆ ನೀಡಿದ್ದು ಇನ್ನೊಬ್ಬ ಎತ್ತರವಿದ್ದ ಹೆಂಗಸು ಬಲವಂತವಾಗಿ ಚಾ,ಸಾ.2 ರವರ ಕತ್ತಿನಲ್ಲಿದ್ದ ಚಿನ್ನದ ಸರವನ್ನು ತುಂಡು ಮಾಡಿ ತೆಗೆದುಕೊಂಡು ಜನರ ಮಧ್ಯೆ

ಪರಾರಿಯಾದರು ಎಂದರೆ ಸರಿಯಲ್ಲ. ಆ ಮೂರು ಅಪರಿಚಿತ ಮಹಿಳೆಯರು ತಮಿಳು ಭಾಷೆ ಮಾತನಾಡುತ್ತಾರೆ. ಓಡಿ ಹೋಗುತ್ತಿರುವುದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ.

7. ದಿನಾಂಕ 07-03-2026 ರಂದು ಪೊಲೀಸರು ಸುಲಿಗೆ ಮಾಡಿದ ಆರೋಪಿಗಳನ್ನು ದಸ್ತಗಿರಿ ಮಾಡಿದ್ದು ಅದೇ ದಿನ ಸಂಜೆ 07.00 ಗಂಟೆಗೆ ನಾನು ಆರೋಪಿಗಳನ್ನು ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರೋಪಿಗಳ ಹೆಸರು ಮಾರಿ, ಬಾಗೀರಥಿ ಮತ್ತು ಶೀತಲ್ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಸದರಿ ಆರೋಪಿಗಳು ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಗಳು ಎಂದರೆ ಸರಿಯಲ್ಲ.

8.ಈ ಬಗ್ಗೆ ನಾನು ಪೊಲೀಸರಿಗೆ ದಿನಾಂಕ 27-12-2025 ಈಗ ಓದಿ ಹೇಳಿದಂತೆ "" ನಾನು ಮೇಲಿನ ವಿಳಾಸದಲ್ಲಿ ------------------------------ ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ' ಎಂದು ಹೇಳಿಕೆಯನ್ನು ಹಾಗೂ ದಿನಾಂಕ 07-03-2026 ರಂದು '" ನಾನು ಮೇಲಿನ ವಿಳಾಸದಲ್ಲಿ ------------------------------ ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ' ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಗಳನ್ನು ನಿ.ಪಿ.12 ಮತ್ತು ನಿ.ಪಿ.13 ಎಂದು ಗುರುತಿಸಲಾಯಿತು.

9.ನಾನು ಆರೋಪಿತರನ್ನು ಘಟನಾ ಸ್ಥಳದಲ್ಲಿ ಹಾಗೂ ಪೊಲೀಸು ಠಾಣೆಯಲ್ಲಿ ಗುರುತಿಸಿದರೂ ಕೂಡಾ ಆರೋಪಿತರನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಂ.ಪಿ.ಕೆ. ವಕೀಲರಿಂದಃ**

ಏನೂ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.